

## ಅಪರೂಪದ ಜೋಳದ ಹಣ್ಣು

ಇದು ಜೋಳದ ಹಣ್ಣು... ಅರೇ, ಇದೇನಪ್ಪಾ ವಿಚಿತ್ರ, ಜೋಳ ಯಾವಾಗ ಹಣ್ಣಾಯಿತು ಅಂತ ಅಂದುಕೊಳ್ಳಬೇಡಿ. ಇದು ನಿಜವಾಗಿಯೂ ಜೋಳದ ಹಣ್ಣೇ. ಆದರೆ ಇದು ರೊಟ್ಟಿ ಮಾಡಲು ಬಳಸುವ ಜೋಳವಲ್ಲ. ಮರದಲ್ಲಿ ಹಣ್ಣಾಗುವ 'ಜೋಳ'. ಸಂಡೂರಿನ ಸಮೀಪದ ಬಂಡ್ರಿ ರಕ್ಷಿತಾರಣ್ಯ ವೀಕ್ಷಣೆಗೆ ಹೋಗಿದ್ದಾಗ ಹಳ್ಳಿಯ ಹಿರಿಯರೊಬ್ಬರು 'ಜೋಳದ ಹಣ್ಣಿನ' ಮರದ ಬಗ್ಗೆ ತಿಳಿಸಿದಾಗ ನಾನೂ ಅಚ್ಚರಿಗೊಂಡಿದ್ದೆ.

ಪ್ರಾಣಿ, ಪಕ್ಷಿಗಳ ಜೊತೆಗೆ ಜನರೂ ಈ ಹಣ್ಣನ್ನು ತಿನ್ನುತ್ತಾರಂತೆ. ಜೋಳದ ತೆನೆಯಂತೆ ಕಾಣುವ ಜೋಳದ ಹಣ್ಣುಗಳನ್ನು ಮರದಲ್ಲಿ ಗೊಂಚಲು ಗೊಂಚಲಾಗಿ ಕಾಣಬಹುದು. ಮರದಲ್ಲಿ ಕಾಯಿಗಳು ಮಾಗಿದಾಗ ಅವು ಕೆಂಪು ಬಣ್ಣಕ್ಕೆ ತಿರುಗುತ್ತವೆ. ಹುಳಿ ಸಿಹಿ ಮಿಶ್ರ ರುಚಿಯ ಈ ಹಣ್ಣುಗಳನ್ನು ಪ್ರಾಣಿ ಪಕ್ಷಿಗಳು ಇಷ್ಟಪಟ್ಟು ತಿನ್ನುತ್ತವಂತೆ. ಗ್ಮೇಲಿನಾ ಮ್ಯಾಕ್ರೊಫಿಲ್ಲಾ (**Gmelina Macrophylla**) ಎಂಬುದು ಈ ಮರದ ವೈಜ್ಞಾನಿಕ ಹೆಸರು. ಸುಮಾರು 10 ಅಡಿ ಎತ್ತರಕ್ಕೆ ಬೆಳೆಯುವ ಹಾಗೂ ಪೊದೆಯಂತೆ ಹರಡಿಕೊಳ್ಳುವ ಈ ಮರಗಳು ಮೇ–ಜುಲೈನಲ್ಲಿ ಕಾಯಿ ಬಿಡುತ್ತವೆ.

–ಜಿ. ಪದ್ಮಾ, ಸಂಡೂರು

## ಕಿಮ್ಮತ್ತಿನ ಕವಡೆ ರವಿಕೆ

'ಕವಡೆ ಕಾಸಿನ ಕಿಮ್ಮತ್ತಿಲ್ಲ' ಎನ್ನುವ ಮಾತು ಕೇಳಿದ್ದೇವೆ. ಆದರೆ ಕವಡೆ ಕಿಮ್ಮತ್ತಿನ ರವಿಕೆ ನೋಡಿದ್ದೀರಾ? ಚಿತ್ರದಲ್ಲಿ ಕಾಣುತ್ತಿರುವುದು ಕವಡೆ ರವಿಕೆ. ಈಚೆಗೆ ಬೆಂಗಳೂರಿನ ಚಿಕ್ಕಪೇಟೆಯ ಎನ್.ಆರ್. ಮಾರ್ಕೆಟ್ ಬಜಾರ್‌ನ ರವಿಕೆ ಅಂಗಡಿಯೊಂದಕ್ಕೆ ಹೋಗಿದ್ದೆ. ಅಲ್ಲಿದ್ದ ತರಹೇವಾರಿ ರವಿಕೆಗಳನ್ನು ನೋಡಿ ಮೂಕಳಾದೆ. ರವಿಕೆಗಳ ರಾಶಿಯಲ್ಲಿ ಅವಿತಿದ್ದ, ಹ್ಯಾಂಗರ್‌ನಲ್ಲಿ ನೇತಾಡುತ್ತಿದ್ದ ಕವಡೆಯ ರವಿಕೆಯು ಗಮನಸೆಳೆಯಿತು. ಬೆಲೆ ಕೇಳಿದೆ. ₹2500 ಎಂದ ಅಂಗಡಿ ಮಾಲೀಕನ ಮಾತು ಕೇಳಿ ದಂಗಾದೆ. ನೂರಾರು ಕವಡೆ ಹೆಣೆದು ತಯಾರಾದ ಈ ರವಿಕೆ ತುಸು ಭಾರ ಅನ್ನಿಸಿತು. ಆದರೆ, ರೂಪದರ್ಶಿಗಳು, ಫ್ಯಾಷನ್‌ಪ್ರಿಯ ಲಲನೆಯರು ಇದನ್ನು ತೊಟ್ಟು ಖುಷಿಪಡಬಹುದು. ನಮ್ಮಂಥವರಿಗೆ ಇಂಥದ್ದನ್ನು ನೋಡುವುದರಲ್ಲೇ ಸುಖ.

–ಪೂರ್ಣಿಮಾ ಹೆಚ್.ಎನ್., ಹೊಸನಗರ





## ಹೊಟ್ಟು ಹೊತ್ತ ಟ್ರ್ಯಾಕ್ಟರ್

ಉತ್ತರ ಕರ್ನಾಟಕದ ಹೆಚ್ಚಿನ ಕಡೆಗಳಲ್ಲಿ ಭತ್ತ ಸಾಗಾಟಕ್ಕೆ ಟ್ರ್ಯಾಕ್ಟರ್‌ಗಳ ಬಳಕೆಯಾಗುತ್ತದೆ. ಭತ್ತದಿಂದ ಅಕ್ಕಿಯನ್ನು ಬೇರ್ಪಡಿಸಿದ ನಂತರ ದೊರೆಯುವ ಹೊಟ್ಟನ್ನು ಕೋಳಿ ಸಾಕಣೆಗಾರರು ಖರೀದಿಸುತ್ತಾರೆ. ಕೋಳಿ ಸಾಕಣೆಯ ಶೆಡ್‌ನ ತಳಭಾಗ ಬೆಚ್ಚಗಿರಲು ಇದನ್ನು ಬಳಸಲಾಗುತ್ತದೆ. ಅಂತಹದ್ದೇ ಕಾರ್ಯಕ್ಕೆ ಹೊಟ್ಟನ್ನು ಸಾಗಿಸುತ್ತಿದ್ದ ಸೊಗಸಾದ ಕೃಷಿ ಬದುಕಿನ ದೃಶ್ಯ ಬಳ್ಳಾರಿಯಲ್ಲಿ ಈಚೆಗೆ ಕಂಡಿತು. ಟ್ರ್ಯಾಕ್ಟರ್‌ನ ಟ್ರಾಲಿಗೆ ದೊಡ್ಡ ದೊಡ್ಡ ಟಾರ್ಪಲ್‌ಗಳನ್ನು ಚೀಲಗಳ ರೂಪದಲ್ಲಿ ಮಾರ್ಪಡಿಸಿ ಕಟ್ಟಿ ಹೊಟ್ಟನ್ನು ದೂರದೂರುಗಳಿಗೆ ಸಾಗಿಸುವುದು ವಾಡಿಕೆ.

–ಚಂದ್ರಹಾಸ್ ಚಾರ್ಮಾಡಿ, ಬೆಳ್ತಂಗಡಿ

